**ಇಂದು ದಿನಾಂಕ:*04.11.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ವಕೀಲರಿಂದಃ**

ನಾನು ದ್ವಿತೀಯ ಪಿಯುಸಿ ಓದಿದ್ದೇನೆ. ಕನ್ನಡ ಓದಲು ಬರುತ್ತದೆ. ಯಾವ ಯಾವ ಸರ್ವೆ ನಂಬರ್ ಗಳ ಮೇಲೆ ಕೇಸು ಹಾಕಿದ್ದೇನೆ ಎಂದು ನೆನಪಿಲ್ಲ. 12–13 ಎಕರೆ ಜಮೀನಿಗೆ ಕೇಸು ಹಾಕಿದ್ದೇನೆ. ನಿ.ಪಿ–8 ರ ದಾಖಲೆ ನಮ್ಮ ತಾತನ ಹೆಸರಿನಲ್ಲಿ ಇರುವುದರಿಂದ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಆಸ್ತಿ ನನ್ನ ತಾತನಿಗೆ ಹೇಗೆ ಬಂದಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇನೆ. ಕಾಳಮ್ಮ ನನ್ನ ಅಜ್ಜಿ, ಗೌರಮ್ಮ ಮತ್ತು ಜಯಮ್ಮ ನಮ್ಮ ತಂದೆಯ ತಂಗಿಯರು, ಗೋವಿಂದೇಗೌಡ, ನಾಗರಾಜು, ಲಕ್ಷ್ಮಣೇಗೌಡ ನನ್ನ ತಂದೆಯ ತಮ್ಮಂದಿರು. ನಿ.ಪಿ–4, 6 ಮತ್ತು 7 ರ ದಾಖಲೆಯ ಪ್ರಕಾರ ದಾವಾ ಐಟಂ ನಂಬರ್ 3 ರಿಂದ 6 ರ ಆಸ್ತಿಗಳು ಕಾಳಮ್ಮ, ಗೌರಮ್ಮ, ಗೋವಿಂದೇಗೌಡ, ನಾಗರಾಜು, ಜಯಮ್ಮ, ಲಕ್ಷ್ಮಣೇಗೌಡ ಇವರ ಜಂಟಿ ಹೆಸರಿನಲ್ಲಿದೆ ಎಂದರೆ ಸರಿ. ಅಲ್ಲಿ ಪೌತಿ ಎಂದು ಇದೆ. ದಾವಾ ಐಟಂ ನಂಬರ್ 6 ರ ಆಸ್ತಿ ಮೊದಲು ಹೇಗೆ ಬಂದಿದೆ ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ದಾವಾ ಐಟಂ ನಂಬರ್ 1 ಮತ್ತು 2 ರ ಆಸ್ತಿ ಕಾಳಮ್ಮ ಮತ್ತು ತಿಮ್ಮೇಗೌಡರಿಗೆ ಕ್ರಯ ಎಂದರೆ ಸರಿ. ನಮ್ಮ ತಂದೆಯ ಆಸ್ತಿಯಲ್ಲಿ ಭಾಗ ಬರಬೇಕೆಂದು ಕೇಸು ಹಾಕಿದ್ದೇನೆ. ನಮ್ಮ ಕುಟುಂಬದ ಮೂಲ ಪುರುಷ ನಮ್ಮ ತಾತ ತಿಮ್ಮೇಗೌಡ, ನಮ್ಮ ಕುಟುಂಬದ ನಿರ್ವಹಣೆಯನ್ನು ನಮ್ಮ ತಾತ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಾತನ ನಂತರ ನಮ್ಮ ದೊಡ್ಡಪ್ಪ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ 1 ಮತ್ತು 2 ರ ಆಸ್ತಿಗಳನ್ನು ಹೊರತುಪಡಿಸಿ ಉಳಿದೆಲ್ಲ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು.

ನಮ್ಮ ತಾತನ ಆಸ್ತಿಗಳ ಆದಾಯದಿಂದ ಜಮೀನು ಖರೀದಿಸಲಾಗಿದೆ ಮತ್ತು ಎಲ್ಲರು ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದೇನೆ ಆದ್ದರಿಂದ ದಾವಾ ಆಸ್ತಿಗಳೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳಾಗಿವೆ. 1995-96 ರಲ್ಲಿ ನಮ್ಮ ಕುಟುಂಬಕ್ಕೆ ಎಷ್ಟು ಆದಾಯ ಬಂದಿತ್ತು ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ವರದರಾಜುರವರ ಹೆಸರಿನಲ್ಲಿ ಬರುತ್ತಿದ್ದ ಆದಾಯದಿಂದ ನಮ್ಮ ಅಜ್ಜ ಹೆಸರಿನಲ್ಲಿ ಏಕೆ ಕ್ರಯ ಮಾಡಿಕೊಂಡಿದ್ದೀರಿ ಎಂದರೆ ಅದನ್ನು ನಮ್ಮ ತಾತ ಇದ್ದಾಗಲೇ ಕ್ರಯ ಮಾಡಿಕೊಂಡಿರುವುದರಿಂದ ಆ ರೀತಿ ಹೇಳಿದ್ದೇನೆ. ನನ್ನ ತಾತ ತೀರಿಕೊಂಡು 17-18 ವರ್ಷಗಳಾಗಿವೆ. ನನ್ನ ತಾತನ ಮರಣ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಕುಟುಂಬ ನಿರ್ವಹಣೆಗಾಗಿ 1995-96 ರಲ್ಲಿ ಅಷ್ಟೇನೂ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. 1995-96 ರಲ್ಲಿ ನಾನು ಹುಟ್ಟಿದ್ದೆ. ಆಗ ನನಗೆ 5-6 ವರ್ಷ ವಯಸ್ಸಾಗಿತ್ತು. ಆಗ ನಮ್ಮ ಕುಟುಂಬಕ್ಕೆ ಎಷ್ಟು ಆದಾಯವಿತ್ತು ಎಂದು ಹೇಗೆ ಗೊತ್ತಾಯಿತು ಎಂದರೆ ಆಗ ನನ್ನ ತಂದೆ ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದರು ಆಗ ನನ್ನ ತಂದೆ ನನಗೆ ಹೇಳಿದ್ದರು. ಈ ಬಗ್ಗೆ ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ನಮ್ಮ ಕುಟುಂಬದ ಆದಾಯದಿಂದಲೇ ದಾವಾ ಐಟಂ ನಂಬರ್ 1 ಮತ್ತು 2 ರ ಆಸ್ತಿಗಳನ್ನು ಖರೀದಿಸಿರುವುದಾಗಿ ದಾಖಲೆ ಕೊಟ್ಟಿಲ್ಲ. ದಾವಾ ಐಟಂ ನಂಬರ್ 1 ಮತ್ತು 2 ರ ಆಸ್ತಿಗಳನ್ನು ನನ್ನ ಅಜ್ಜ ಒಟ್ಟು ಕುಟುಂಬದ ಆದಾಯವನ್ನು ಹೊರತುಪಡಿಸಿ ಸ್ವಯಾರ್ಜಿತವಾಗಿ ಕ್ರಯ ಮಾಡಿಕೊಂಡಿರುವುದರಿಂದ ಅದು ಅವರ ಸ್ವಂತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ಮತ್ತು 2 ರ ಆಸ್ತಿಗಳ ಮೇಲೆ ನಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**